ರೋಸ್‌ಮೆರಿ, ಆಲಿವ್ ಆಯಿಲ್, ಬಸಿಲ್, ಆರ್ಗ್ಯಾನೊ, ಟೀ ಟ್ರೀ, ಲೆಮನ್ ಗ್ರಾಸ್,ಲ್ಯಾವೆಂಡರ್, ರೋಸ್ ಹಿಪ್, ಜೊಜೋಬ... ಇತ್ಯಾದಿ ಎಣ್ಣೆಗಳು ಮುಖದ ಸೌಂದರ್ಯವನ್ನು ಹೆಚ್ಚಿಸುವಲ್ಲಿ ಹೆಚ್ಚಿನ ಪಾತ್ರ ವಹಿಸುತ್ತದೆ. ಇವು ಸೋಂಕು ನಿವಾರಿಸಿ ಮುಖದ ಕಾಂತಿ ಹೆಚ್ಚಿಸುವುದರ ಜತೆಗೆ ಒತ್ತಡನ್ನು ನಿವಾರಿಸುತ್ತದೆ.

### ಲ್ಯಾವೆಂಡರ್ ಆಯಿಲ್

ಇದರಲ್ಲಿ ಆ್ಯಂಟಿ ಇನ್‌ಫ್ಲಮೆಟರಿ ಗುಣ ಹೆಚ್ಚಿದೆ. ಮುಖದ ತುರಿಕೆ ಕಡಿಮೆ ಮಾಡುವುದರ ಜತೆಗೆ ಮುಖದ ಚರ್ಮದಲ್ಲಿ ಕೆಂಪು ಏನಾದರೂ ಆದರೆ ಅದನ್ನು ಕಡಿಮೆ ಮಾಡುತ್ತದೆ. ಐದು ಚಮಚ ಅಲೊವೆರಾ ಜೆಲ್‌ಗೆ 3 ಹನಿ ಲ್ಯಾವೆಂಡರ್ ಎಣ್ಣೆಗೆ ಹಾಕಿ ಚೆನ್ನಾಗಿ ಮಿಕ್ಸ್ ಮಾಡಿಕೊಂಡು ನಿಮ್ಮ ಮುಖಕ್ಕೆ ಹಚ್ಚಿಕೊಳ್ಳಿ. ಇದನ್ನು 20 ನಿಮಿಷ ಹಾಗೆಯೇ ಬಿಟ್ಟು ಬಿಡಿ. ನಂತರ ಮುಖ ತೊಳೆಯಿರಿ. ದಿನಕ್ಕೊಮ್ಮೆ ಹೀಗೆ ಮಾಡಿದರೆ ಬೇಗನೆ ಫಲಿತಾಂಶ ಸಿಗುತ್ತದೆ.

### ರೋಸ್ ಹಿಪ್ ಆಯಿಲ್

ಮುಖದಲ್ಲಿ ಕಾಣಿಸಿಕೊಳ್ಳುವ ನೆರಿಗೆ ಹಾಗೂ ಕಲೆಗಳಿಗೆ ಇದು ತುಂಬಾ ಒಳ್ಳೆಯದು. ಆ್ಯಂಟಿ ಆಕ್ಸಿಡೆಂಟ್ ಇದರಲ್ಲಿ ಹೇರಳವಾಗಿದೆ. 3 ಚಮಚ ಅಲೊವೆರಾ ಜೆಲ್‌ಗೆ 5 ಹನಿ ಲ್ಯಾವೆಂಡರ್ ಆಯಿಲ್. 5 ಹನಿ ಲೆಮನ್ ಆಯಿಲ್, ಒಂದು ಚಮಚ ರೋಸ್ ಹಿಪ್ ಆಯಿಲ್ ಹಾಕಿ ಚೆನ್ನಾಗಿ ಮಿಕ್ಸ್ ಮಾಡಿ ಮುಖಕ್ಕೆ ಹಚ್ಚಿಕೊಳ್ಳಿ. ರಾತ್ರಿಯಿಡೀ ಇದನ್ನು ಹಾಗೆಯೇ ಬಿಟ್ಟು ಬಿಡಿ. ಬೆಳಿಗ್ಗೆ ಮುಖ ತೊಳೆದರೆ ಕಾಂತಿಯುತವಾಗುತ್ತದೆ.

### ಟೀ ಟ್ರಿ ಆಯಿಲ್

ಮೊಡವೆ ಸಮಸ್ಯೆ ಕಾಡುತ್ತಿದ್ದರೆ ಈ ಎಣ್ಣೆ ಹೇಳಿ ಮಾಡಿಸಿದ್ದು. ಎಣ್ಣೆ ಚರ್ಮದವರಿಗೆ ಇದು ಬಹಳ ಒಳ್ಳೆಯದು. 6 ಹನಿ ಟಿ ಟ್ರೀ ಆಯಿಲ್‌ಗೆ ಒಂದು ಚಮಚ ಜೇನುತುಪ್ಪ ಹಾಕಿ ಮಿಕ್ಸ್ ಮಾಡಿ ಚೆನ್ನಾಗಿ ತೊಳೆದು ಒರೆಸಿದ ಮುಖಕ್ಕೆ ಹಾಕಿಕೊಂಡು 20 ನಿಮಿಷ ಬಿಟ್ಟು ಬಿಡಿ. ನಂತರ ಉಗುರು ಬೆಚ್ಚಗಿನ ನೀರಿನಿಂದ ಮುಖ ತೊಳೆಯಿರಿ. ಹೀಗೆ ಮಾಡುವುದರಿಂದ ಮುಖದಲ್ಲಿನ ಮೊಡವೆ, ಕಲೆ, ಚುಕ್ಕಿಗಳು ನಿವಾರಣೆಯಾಗುತ್ತದೆ.

ಬಾಡಿ ಮಸಾಜ್ ಮಾಡಿಕೊಳ್ಳುವುದಕ್ಕೂ ಕೂಡ ಈ ಎಣ್ಣೆಯನ್ನು ಉಪಯೋಗಿಸಬಹುದು. ಮಸಾಜ್ ಮಾಡಲು ಬಳಸುವ ಎಣ್ಣೆಗೆ 2 ಹನಿ ಈ ಎಸೆನ್ಶಿಯಲ್ ಆಯಿಲ್ ಹಾಕಿ ಮಿಕ್ಸ್ ಮಾಡಿಕೊಂಡು ಇಡೀ ಮೈಗೆ ಹಚ್ಚಿಕೊಂಡು ಸ್ನಾನ ಮಾಡಿದರೆ ಆರಾಮದಾಯಕವೆನಿಸುತ್ತದೆ. ಇದರಿಂದ ಯಾವುದೇ ರೀತಿಯ ಅಡ್ಡ ಪರಿಣಾಮವಿಲ್ಲ. ಇನ್ನು ನಿಮ್ಮ ತ್ವಚೆಗೆ ಅಲರ್ಜಿ ಸಮಸ್ಯೆ ಇದ್ದರೆ ಮೊದಲು ಸ್ವಲ್ಪ ಹಚ್ಚಿಕೊಂಡು ಪರೀಕ್ಷಿಸಿ ನಂತರ ಉಪಯೋಗಿಸಿ. ■

# ಗುಲಾಬಿ ಜಲ!

**ಹೂವುಗಳ ರಾಣಿ ಚೆಲುವಿನ ಗುಲಾಬಿ ಬಹೂಪಯೋಗಿ. ಸೌಂದರ್ಯಚಿಕಿತ್ಸೆಯಲ್ಲಿ ಬಹುವಾಗಿ ಬಳಕೆಯಾಗುವ ಗುಲಾಬಿ ಎಸೆನ್ಸ್ ಫೇಸ್‌ಪ್ಯಾಕ್, ಫೇಷಿಯಲ್‌ಗಳಿಗೆ ಉಪಯುಕ್ತವಾದರೆ ಗುಲಾಬಿ ಜಲ (ರೋಸ್ ವಾಟರ್) ತ್ವಚೆಯ ಕಾಂತಿ ಹೆಚ್ಚಿಸಲು ಸಹಕಾರಿ.**

■ ಯು.ಎ.



ಗುಲಾಬಿ ಹೂವು ನೋಡಲು ಚಂದ. ಆಕರ್ಷಕ ರೂಪ, ಬಣ್ಣ, ಸುವಾಸನೆ (ಕೆಲವು ವಿಧದ್ದು) ಗಳಲ್ಲಿ ಗುಲಾಬಿ ಹೂವನ್ನು ಮೀರಿಸುವ ಹೂವು ಯಾವುದಿದೆ ಹೇಳಿ? ಸೌಂದರ್ಯ ಪೋಷಣೆಯಲ್ಲಿ ಗುಲಾಬಿಯ ಪಾತ್ರ ಮಹತ್ವದ್ದು. ಇದರ ಪಕಳೆಗಳಿಂದ ತಯಾರಿಸಿದ ಜಲ ಸೌಂದರ್ಯ ಚಿಕಿತ್ಸೆಯಲ್ಲಿ ಬಳಸಲಾಗುತ್ತದೆ.

ರೋಸ್ ಆಯಿಲ್ ಕೂಡ ಪ್ರಮುಖ ಸೌಂದರ್ಯ ಸಾಧನ. ಗುಲಾಬಿ ಪಕಳೆಗಳಿಂದ ಪರಿಮಳ ದ್ರವ್ಯವನ್ನು ತೆಗೆದು ಅದನ್ನು ಸೌಂದರ್ಯವರ್ಧನೆಯಲ್ಲಿ ಬಳಸಲಾಗುತ್ತದೆ. ಜೊತೆಗೆ ಗುಲಾಬಿ ಜಲ (ರೋಸ್ ವಾಟರ್) ಪಡೆಯುವ ವಿಧಾನ ಪ್ರಾಚೀನ ಪರ್ಷಿಯಾದಲ್ಲಿ ಬಹಳ ಜನಪ್ರಿಯತೆ ಗಳಿಸಿತ್ತು. ಪರ್ಷಿಯಾ, ಅರೇಬಿಯಾದಿಂದ ಭಾರತಕ್ಕೆ ಬಂದ ಗುಲಾಬಿ ಹೂವುಗಳ ರಾಣಿಯಂತೆ ಕಂಗೊಳಿಸುತ್ತಿರುವುದಲ್ಲದೆ ವಿಶ್ವದಾದ್ಯಂತ ತನ್ನ ಕಂಪನ್ನು ಪಸರಿಸುತ್ತಿದೆ.

### ಬಹೂಪಯೋಗಿ ಗುಲಾಬಿ

ಗುಲಾಬಿ ಹೂವು ಅಲಂಕಾರಕ್ಕೆ, ಪೂಜೆಗೆ, ಮುಡಿಯಲು, ಸೌಂದರ್ಯಚಿಕಿತ್ಸೆಯಲ್ಲಿ ಇಷ್ಟೇ ಅಲ್ಲದೆ ಆರೋಗ್ಯ, ಅಡುಗೆಗಳಲ್ಲೂ ಗುಲಾಬಿ ಬಳಕೆ ಇದೆ. ಗುಲಾಬಿ ಪಕಳೆಗಳಿಂದ ತಯಾರಿಸಿದ ಗುಲ್ಕಂದ್ ತಿನ್ನಲು ಬಹಳ ರುಚಿ.

### ಚರಿತ್ರೆಯಲ್ಲಿ ಗುಲಾಬಿ ಜಲ

ಗುಲಾಬಿ ಜಲದ ಇತಿಹಾಸ ಬಹು ರೋಚಕ. ಈಜಿಪ್ಟಿನ ರಾಣಿ ಕ್ಲಿಯೋಪಾತ್ರ ಸೌಂದರ್ಯವರ್ಧನೆಗೆ ಗುಲಾಬಿ ಜಲ ಬಳಸುತ್ತಿದ್ದರು. ಮೊಘಲರ ರಾಣಿ ಗುಲಾಬಿ ಜಲವನ್ನು ಬಳಸಿದ ಸೌಂದರ್ಯವರ್ಧಕವನ್ನು ಉಪಯೋಗಿಸುತ್ತಿದ್ದುದು, ಖ್ಯಾತ ಚಿತ್ರ ಕಲಾವಿದ ಮೈಕೆಲಾಂಜಲೋ ಸೌಂದರ್ಯವರ್ಧನೆಗೆ ಗುಲಾಬಿ ಜಲ ಬಳಸಿದ ಚಹಾ ಕುಡಿಯುತ್ತಿದ್ದರು ಎನ್ನುತ್ತದೆ ಇತಿಹಾಸ.

### ಏನಿದು ಗುಲಾಬಿ ಜಲ?

ತಾಜಾ ಗುಲಾಬಿ ಹೂವಿನ ದಳವನ್ನು ಚೆನ್ನಾಗಿ ತೊಳೆದು ಮಣ್ಣಿನ ಪಾತ್ರೆಗೆ ನೀರು ಹಾಕಿ ಅದರಲ್ಲಿ ಈ ದಳಗಳನ್ನು ಹಾಕಿ ಮುಚ್ಚಿ ಬಿಸಿ ಮಾಡಬೇಕು, ಈ ನೀರನ್ನು ಸೋಸಿ ಗಾಜಿನ ಬಾಟಲಿಯಲ್ಲಿ ಶೇಖರಿಸಿಡಬೇಕು. ಇದೇ ಗುಲಾಬಿ ಜಲ.

ಗುಲಾಬಿ ಜಲ ಉತ್ತಮ ಟೋನರ್ ಆಗಿ ಕೆಲಸ ಮಾಡುತ್ತದೆ. ಮೇಕಪ್ ಅನ್ನು ಅಳಿಸಿ ಹಾಕಬೇಕಾದರೆ ಗುಲಾಬಿ ಜಲ ಬಳಸಬಹುದು, ಇದು ಮಾಯಿಶ್ಚರೈಸರ್ ಆಗಿಯೂ ಕೆಲಸ ಮಾಡುತ್ತದೆ. ಮೊಡವೆಗಳನ್ನು ನಿವಾರಿಸುತ್ತದೆ. ಕಣ್ಣಿನಸುತ್ತ ಮೂಡಿದ ಕಪ್ಪು ವರ್ತುಲವನ್ನು ಹೋಗಲಾಡಿಸುತ್ತದೆ. ವಾರಕ್ಕೊಮ್ಮೆ ಗುಲಾಬಿ ಎಣ್ಣೆ ಹಚ್ಚಿ ಸ್ನಾನ ಮಾಡಿದರೆ ಚರ್ಮ ಮೃದುವಾಗುತ್ತದೆ. ನಿದ್ದೆ ಬರದಿದ್ದರೆ ದಿಂಬಿನ ಸುತ್ತಲೂ ಗುಲಾಬಿ ಜಲ ಚಿಮುಕಿಸಿದರೆ ಚೆನ್ನಾಗಿ ನಿದ್ದೆ ಬರುತ್ತದೆ. ಗುಲಾಬಿ ಜಲವನ್ನು ಪ್ರತಿದಿನ ಮುಖ, ಕತ್ತು ಕೈಕಾಲಿಗೆ ಹಚ್ಚಿಕೊಂಡರೆ ಚರ್ಮದ ಕಾಂತಿ ಹೆಚ್ಚುತ್ತದೆ. ಹೀಗೆ ಗುಲಾಬಿ ಜಲ ಸೌಂದರ್ಯವರ್ಧನೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ■